KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಗೋವಿಂದರಾಜು | **ಪಿ.ಡಬ್ಲ್ಯೂ** | 07 |
| **ತಂದೆಯ ಹೆಸರು** | ಪ್ರಕಾಶ | **ಸಿ.ಡಬ್ಲ್ಯೂ** | 12 |
| **ವಯಸ್ಸು** | 41 ವರ್ಷ | | |
| **ಉದ್ಯೋಗ** | ಹೆಚ್.ಡಿ.ಎಫ್.ಸಿ. ಬ್ಯಾಂಕಿನಲ್ಲಿ ಎಕ್ಸಿಕ್ಯೂಟಿವ್ | | |
| **ವಾಸಸ್ಥಳ** | ಕಡೂರು | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 14-11-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಕಾಣುತ್ತಿರುವ ಆರೋಪಿ ನನಗೆ ಗೊತ್ತು. ಚಾಸಾ.11 ಮತ್ತು ಮೃತ ತಮ್ಮಯ್ಯರವರು ಗೊತ್ತು.**

2. **ಆರೋಪಿ ನಮ್ಮ ಬ್ಯಾಂಕಿನಿಂದ ರೂ.6 ಲಕ್ಷ ಹಣವನ್ನು ಸಾಲ ಪಡೆದಿದ್ದರು, ಅದಕ್ಕೆ ಆತನ ತಂದೆ Co-obligant ಆಗಿದ್ದರು. ಸದರಿ ಸಾಲದ ಕಂತನ್ನು ಆರೋಪಿ ಕಟ್ಟಿರಲಿಲ್ಲ. ಕಂತನ್ನು ಕಟ್ಟದಿದ್ದಾಗ ನಾನು ಮತ್ತು ಚಾಸಾ.11 ರವರು ಆರೋಪಿಯ ಮನೆಗೆ ವಿಚಾರಿಸಲು ಡಿಸೆಂಬರ್ 2020 ರಲ್ಲಿ ಹೋಗಿದ್ದೆವು. ಆರೋಪಿ ಮನೆಗೆ ಹೋಗಿ, ಆತನನ್ನು, ಆತನ**

ತಂಗಿ ಮತ್ತು ತಾಯಿಯನ್ನು ವಿಚಾರಿಸಿ ಲೋನ್ ಕಟ್ಟುವಂತೆ ಹೇಳಿ ಬಂದೆವು. ನಾನು ಈ ಪ್ರಕರಣದ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 04-04-2020 ರಂದು ಖಾತೆ ಸಂಖ್ಯೆಃ 84067993 ರಲ್ಲಿ ರೂ.5,68,762/- ಸಾಲ ಪಡೆದಿದ್ದು ಅರ್ಧ ವರ್ಷಕ್ಕೊಮ್ಮೆ ರೂ.84,762/- ಕಟ್ಟುವಂತೆ ಆರೋಪಿಗೆ ತಿಳಿಸಿರುತ್ತೇವೆ ಎಂದರೆ ಸರಿ. ಸದರಿ ಕಂತು ಕಟ್ಟದಿದ್ದಾಗ, ದಿಃ 11-01-2021 ರಂದು ನಾನು ಮತ್ತು ಚಾಸಾ.11 ರವರು ಕಂತು ಕಟ್ಟದಿದ್ದವರನ್ನು ಭೇಟಿ ಮಾಡಲೆಂದು ಗ್ರಾಮಗಳಿಗೆ ಹೋಗುವಾಗ, ಆರೋಪಿಯನ್ನು ಭೇಟಿ ಮಾಡಲು ಅವರ ಊರಿನ ರಸ್ತೆಯಲ್ಲಿ ಹೋಗುವಾಗ ಮಧ್ಯಾಹ್ನ 12 ಗಂಟೆಗೆ ಆತನ ತಂದೆ ಸಿಕ್ಕಿ ವಿಷಯ ತಿಳಿಸಿ ಕಂತು ಕಟ್ಟುವಂತೆ ಹೇಳಿದಾಗ ಅವರು ಆರೋಪಿಗೆ ತಿಳಿಸುವಂತೆ ಹೇಳಿದಾಗ ನಾವು ನಮಗೆ ಸಮಯ ಇಲ್ಲ ನೀವೆ ತಿಳಿಸಿ ಎಂದು ಹೇಳಿ ಹೋದೆವು ಎಂದರೆ ಸರಿಯಲ್ಲ.

4. ನಂತರ ವಿಚಾರ ತಿಳಿಯಲಾಗಿ, ಆರೋಪಿ ಆತನ ತಂದೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿರುತ್ತಾನೆ ಎಂದು ವಿಷಯ ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ದಿಃ 03-02-2021 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ

ಹೇಳಿಕೆಯನ್ನು ನಿಪಿ.15 ಎಂದು ಗುರುತಿಸಲಾಯಿತು. ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app “**eCourts Services**” from Android or iOS